ಕರ್ನಾಟಕ ಸರ್ಕಾರ

Govt.of Karnataka

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಜಿಲ್ಲೆ, ಧಾರವಾಡ-580 001

OFFICE OF THE DEPUTY COMMISSIONER, DHARWAD DISTRICT, DHARWAD-580 001

ದೂರವಾಣಿ / Telephone: 0836-2233840, 2233880, 2233888
ಫ್ಯಾಕ್ಸ್ / Fax: 0836-2747102

*E-mail : dcdharwad@bsnl.in*

*"ಕನ್ನಡ ಅನುಷ್ಠಾನ ವರ್ಷ-2009"*

ನಂ. ಸಿಬ್ಬಂದಿ(3)/ಇತರೆ/ವಹಿ-21/2008-09 ದಿನಾಂಕ 30-11-2009

# ಪ್ರ ಕ ಟ ಣೆ

ವಿಷಯ:- ಗ್ರಾಮ ಲೆಕ್ಕಾಧಿಕಾರಿಗಳ ತಾತ್ಕಾಲಿಕ ನೇಮಕಾತಿ ಆಯ್ಕೆ ಪಟ್ಟಿ ಪ್ರಕಟಣೆ.

ಉಲ್ಲೇಖ:-
1. ಸರಕಾರದ ಅಧಿಸೂಚನೆ ಕ್ರ: ಕಂಇ/299/ಡಿಎಸ್‌ಸಿ/2006, ದಿನಾಂಕ 08-09-2009 ಮತ್ತು ಸುತ್ತೋಲೆ ದಿನಾಂಕ 13-11-2009.
2. ಈ ಕಾರ್ಯಾಲಯದ ಸಮಸಂಖ್ಯೆ ಅಧಿಸೂಚನೆ ದಿನಾಂಕ 26-09-2009.

ಉಲ್ಲೇಖ-2 ರ ಈ ಕಚೇರಿಯ ಅಧಿಸೂಚನೆಯಲ್ಲಿ ಧಾರವಾಡ ಜಿಲ್ಲೆಗೆ ಸಂಬಂಧಿಸಿದಂತೆ 57 ಗ್ರಾಮ ಲೆಕ್ಕಾಧಿಕಾರಿಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿತ್ತು. ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲನೆ ಮಾಡಿ, ರೋಷ್ಟರ-ಕಮ್-ಮೆರಿಟ್ ಹಾಗೂ ಕಾಲಕಾಲಕ್ಕೆ ಸರಕಾರದಿಂದ ಹೊರಡಿಸಿದ ಆದೇಶ/ಮಾರ್ಗಸೂಚಿಯನ್ವಯ ಗ್ರಾಮ ಲೆಕ್ಕಾಧಿಕಾರಿಗಳ ಮೆರಿಟ್ ಪಟ್ಟಿ 1 ಕ್ಕೆ 5 ರ ಅನುಪಾತದಲ್ಲಿ ತಯಾರಿಸಿ ಪ್ರಕಟಣೆ ಪ್ರಕಟಿಸಲಾಗಿದೆ. ಸದರ ತಾತ್ಕಾಲಿಕ ಪಟ್ಟಿಯನ್ನು ಈ ಕಾರ್ಯಾಲಯದ ನೋಟೀಸು ಫಲಕದಲ್ಲಿ ಹಾಗೂ ವೆಬ್‌ಸೈಟ್‌ದಲ್ಲಿ **http://www.dharwad.nic.in** ನಲ್ಲಿ, ಜಿಲ್ಲಾ ಪಂಚಾಯತ ಧಾರವಾಡ, ಉಪವಿಭಾಗಾಧಿಕಾರಿಗಳು ಧಾರವಾಡ, ಜಿಲ್ಲೆಯ ಎಲ್ಲ ತಹಶೀಲ್ದಾರ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಕಾರ್ಯಾಲಯಗಳ ನೋಟೀಸು ಫಲಕದ ಮೇಲೆ ಪ್ರಸಿದ್ಧಿ ಪಡಿಸಿದೆ. ಸದರ ತಾತ್ಕಾಲಿಕ ಪಟ್ಟಿಯು ಮೂಲ ದಾಖಲಾತಿಗಳ ಪರಿಶೀಲನೆಗೆ ಒಳಪಟ್ಟಿರುತ್ತದೆ. **ಈ ಪಟ್ಟಿಯನ್ನು ನೇಮಕಾತಿ ಅಂತಾ ಪರಿಗಣಿಸುವಂತಿಲ್ಲ. ಅರ್ಜಿದಾರರು ದಯವಿಟ್ಟು ಗಮನಿಸಲು ಕೋರಲಾಗಿದೆ.**

ಸದರ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳು/ತಕರಾರು ಇದ್ದಲ್ಲಿ ದಿನಾಂಕ 14-12-2009 (ಸಾಯಂಕಾಲ 5-30) ರೊಳಗೆ ಈ ಕಚೇರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ತದನಂತರ ಬಂದ ಆಕ್ಷೇಪಣೆ/ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

**ಪ್ರಕಟಿತ ಮೆರಿಟ್ ಪಟ್ಟಿಯಲ್ಲಿಯ ಅಭ್ಯರ್ಥಿಗಳು ತಮಗೆ ಅನ್ವಯಿಸುವ ಈ ಕೆಳಗಿನ ಮೂಲ ದಾಖಲಾತಿಗಳೊಂದಿಗೆ ಪರಿಶೀಲನೆಗಾಗಿ ಖುದ್ದಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯ ಧಾರವಾಡದಲ್ಲಿ ದಿನಾಂಕ 15-12-2009 ರಂದು ಬೆಳಿಗ್ಗೆ 11-00 ಘಂಟೆಗೆ ಹಾಜರ ಇರಲು ತಿಳಿಸಿದೆ.**

1. ಪಿ.ಯು.ಸಿ./ಸಿ.ಬಿ.ಎಸ್.ಇ./ಆಯ್.ಸಿ.ಎಸ್.ಇ. ಮೂಲ ಪ್ರಮಾಣ ಪತ್ರ.
2. ಜನ್ಮ ದಾಖಲೆ ಮೂಲ ಪ್ರಮಾಣ ಪತ್ರ.
3. ಅರ್ಜಿಯಲ್ಲಿ ಮೀಸಲಾತಿ (SC, ST, Catagery-1, 2A, 2B, 3A, 3B, PHP, Ex-Serviceman, Rural, PDP, KMS) ಬಗ್ಗೆ ಕ್ಲೇಮ ಮಾಡಿದ ಅಧಿಕೃತ ಮೂಲ ಪ್ರಮಾಣ ಪತ್ರ.
4. ಅಂಗವಿಕಲ ಅಭ್ಯರ್ಥಿಗಳು ದಿನಾಂಕ 30-10-2009 ರೊಳಗಿನ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ನಿಗದಿ ಪಡಿಸಿದ ನಮೂನೆಯಲ್ಲಿ ರುಜು ಪಡೆದ ಪ್ರಮಾಣ ಪತ್ರ.

(ದರ್ಪಣ್ ಜೈನ್)
**ಅಧ್ಯಕ್ಷರು,**
**ಗ್ರಾಮ ಲೆಕ್ಕಾಧಿಕಾರಿ ನೇಮಕಾತಿ ಸಮಿತಿ**
**ಹಾಗೂ ಜಿಲ್ಲಾಧಿಕಾರಿಗಳು,ಧಾರವಾಡ**

**ಪ್ರತಿಗಳು:**

1. ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ವಿಪತ್ತು ನಿರ್ವಹಣೆ ಮತ್ತು ಸೇವೆಗಳು-2, ಕರ್ನಾಟಕ ಸರಕಾರದ ಸಚಿವಾಲಯ, ಬಹು ಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.
2. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಧಾರವಾಡ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಉಪವಿಭಾಗಾಧಿಕಾರಿಗಳು, ಧಾರವಾಡ ಉಪವಿಭಾಗ, ಧಾರವಾಡ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಜಿಲ್ಲೆಯ ಎಲ್ಲ ತಹಶೀಲ್ದಾರರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಧಾರವಾಡ ಇವರಿಗೆ- ಸದರ ವಿವರವನ್ನು ಪುಕ್ಕಟೆಯಾಗಿ ಪ್ರಕಟಿಸಲು ತಿಳಿಸಿದೆ.

# ಸೂಚನೆ

ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ಆಯ್ಕೆಯಾದ ವಿವಿಧ ವರ್ಗಗಳ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳೊಂದಿಗೆ ಪರಿಶೀಲನೆ ಕುರಿತು ಈ ಕಾರ್ಯಾಲಯಕ್ಕೆ ದಿನಾಂಕ: **15/12/2009** ರಂದು ಹಾಜರಾಗಬೇಕು. ಹಾಜರಾಗದಿದ್ದಲ್ಲಿ ಅಥವಾ ಮೂಲ ದಾಖಲೆಗಳ ಪರಿಶೀಲನೆ ಕಾಲಕ್ಕೆ ಮತ್ತು ವೈದ್ಯಕೀಯ ಪರೀಕ್ಷೆಯಲ್ಲಿ ಅನರ್ಹರೆಂದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಗಳನ್ನು ಆಯ್ಕೆಗೆ ಅನರ್ಹರೆಂದು ಪರಿಗಣಿಸಿ ಸದರಿ ಹುದ್ದೆಗಳನ್ನು ಕಾಯ್ದಿರಿಸಿದ ಪಟ್ಟಿಯಿಂದ ವರ್ಗವಾರು ಮರು ವಿಂಗಡಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಭರ್ತಿ ಮಾಡಲಾಗುವುದು.

(The candidates who have been selected in the provisional selection list for verification under different category who fail to appear for verification of original documents on the scheduled date of 15/12/2009 or candidates who are found not qualified for selection at the time of verification of original documents & candidates who fail to qualify the medical test, will be disqualified from selection & such posts would be filled up from the waiting list of candidates after re-arranging the category of candidates from waiting list as per rules.)

| **Column** | **Content** | ವಿವರಣೆ (**Description)** |
|---|---|---|
| Group claimed | KMS | ಕನ್ನಡ ಮಾಧ್ಯಮ ಶಾಲೆ (Kannada Medium School) |
| | PHC | ಅಂಗವಿಕಲ ಅಭ್ಯರ್ಥಿ (Physically Handicapped) |
| | PDP | ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ (Project Displaced) |
| | EX | ಮಾಜಿ ಸೈನಿಕ (Ex-Service Man) |
| Roster Reservation | O | ಇತರೆ (Others) |
| | W | ಮಹಿಳಾ ಅಭ್ಯರ್ಥಿ (Woman) |
| | R | ಗ್ರಾಮೀಣ ಅಭ್ಯರ್ಥಿ (Rural) |
| | H | ಅಂಗವಿಕಲ ಅಭ್ಯರ್ಥಿ (Physically Handicapped) |
| | E | ಮಾಜಿ ಸೈನಿಕ (Ex-Service Man) |
| | K | Kannada Medium |
| | P | Project Displaced |